ಕರ್ನಾಟಕ ಸರ್ಕಾರ

# ತಹಶೀಲ್ದಾರರ ನ್ಯಾಯಾಲಯ ಹೂವಿನಹಡಗಲಿ

ಂ.ಕಂ/ಪಹಣಿ/ವಿವಾದ/17/2015-16 ದಿನಾಂಕ: 26-05-2016

ಉಪಸ್ಥಿತರು : ಹೆಚ್.ವಿಶ್ವನಾಥ, ತಹಶೀಲ್ದಾರರು,

| ವಾದಿಗಳು | ಪ್ರತಿವಾದಿಗಳು/ಎದುರುದಾರರು |
|---|---|
| **ಶ್ರೀ.1)ಕಡ್ಲೆಪ್ಪರ ಈರಪ್ಪ ತಂದೆ ಶಿದ್ದಪ್ಪ**<br>**2)ಕಡ್ಲೆಪ್ಪರ ಚಂದ್ರಪ್ಪ ತಂದೆ ಶಿದ್ದಪ್ಪ**<br>**ಎಂ ಎಂ ವಾಡ** | **ಶ್ರೀಮತಿ ಕೆ ರತ್ನಮ್ಮ ಗಂಡ ಲೇಟ್ ಬಸವರಾಜಪ್ಪ**<br>**ಹಿರೇಕೊಳಚಿ** |

**ದಾವಾ ಜಮೀನಿನ ವಿವರ**

| ಗ್ರಾಮ | ಸರ್ವೇ ನಂಬರ್ | ವಿಸ್ತೀರ್ಣ (ಎಕರೆ.ಸೆಂಟ್ಸ್) |
|---|---|---|
| **ಮಾನ್ಯರ ಮಸಲವಾಡ** | 267/a/1<br>398/b<br>391/3 | 0.10<br>1.16<br>2.45 |

**ಪ್ರಸ್ತಾವನೆ :**

ಮೇಲಿನ ದಾವಾ ಜಮೀನುಗಳಿಗೆ ಸಂಬಂದಿಸಿದಂತೆ ಶ್ರೀ ಕಡ್ಲೆಪ್ಪರ ಈರಪ್ಪ ತಂದೆ ಶಿದ್ದಪ್ಪ ಇವರು ದಿನಾಂಕ 17/07/2015 ರಂದು ಅರ್ಜಿಯನ್ನು ಸಲ್ಲಿಸಿ ಮೂಲ ಪಟ್ಟಾದಾರಳಾದ ಶ್ರೀಮತಿ ಕೆಂಚಮ್ಮ ಇವರು ದಿನಾಂಕ 08/02/1968 ರಂದು ತೀರಿಕೊಂಡಿದ್ದು ಪೋತಿ ವಾರಸಾ ಪ್ರಕಾರ ತಮ್ಮ ಹಾಗು ತಮ್ಮ ಸಹೋದರರ ಹೆಸರಿಗೆ ಪಟ್ಟಾ ಬದಲಾವಣೆ ಮಾಡಲು ಅರ್ಜಿ ಸಲ್ಲಿಸಿರುತ್ತಾರೆ..ಈ ಮೇರೆಗೆ ಎಂ ಆರ್ ಸಂಖ್ಯೆ ಹೆಚ್4/2015-16 ರಲ್ಲಿ ಪ್ರಕರಣ ದಾಖಲಿಸಿಕೊಂಡು ನಮೂನೆ 21 ನೋಟೀಸನ್ನು ಜಾರಿ ಮಾಡಿ ಪ್ರಚುರಪಡಿಸಿರುತ್ತದೆ.ನೋಟೀಸು ಪ್ರಚುರಪಡಿಸಿದ ನಿಗದಿತ ಅವದಿಯೊಳಗ ಶ್ರೀಮತಿ ಕೆ ರತ್ನಮ್ಮ ಎಂಬುವರು ಹಕ್ಕು ಬದಲಾವಣೆ ಮಾಡಬಾರದೆಂದು ತಕರಾರು ಸಲ್ಲಿಸಿರುತ್ತಾರೆ.

ಸದರಿ ಪ್ರಕರಣವನ್ನು ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ, ಕರ್ನಾಟಕ ಭೂಕಂದಾಯ ಕಾಯ್ದೆ 1964 ಕಲಂ 129ರ ಅನ್ವಯ ನೈಸರ್ಗಿಕ ನ್ಯಾಯ ದೃಷ್ಟಿಯಿಂದ ವಾದಿ ಮತ್ತು ಪ್ರತಿವಾದಿಗಳಿಗೆ ಹಾಗು ಅವರ ಪರ ನ್ಯಾಯವಾದಿಗಳ ರವಗೂ ಕೇಳಿಕೊಳ್ಳಲು ಅವಕಾಶ ನೀಡಿ ದಿನಾಂಕ 29/09/2015 ರಂದು ವಿಚಾರಣೆಗೆ ಹಾಜರಾಗಲು ನೋಟೀಸು ನೀಡಿ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಲಾಯಿತು.

ವಿಚಾರಣೆಗೆ ವಾದಿಗಳು ಮತ್ತು ಪ್ರತಿವಾದಿಗಳು ಹಾಜರಾಗಿ ಹೇಳಿಕೆಯನ್ನು ನೀಡಿ ತಾವುಗಳು ಪಂಚರ ಸಮಕ್ಷಮದಲ್ಲಿ ತಮ್ಮ ವಿವಾದವನ್ನು ಬಗೆಹರಿಸಿಕೊಂಡಿರುವುದರಿಂದ ಹಾಲಿ ಪ್ರಕರಣದಲ್ಲಿ ಯಥಾಸ್ಥಿತಿಯನ್ನು ಮುಂದುವರೆಸಿ ಶ್ರೀಮತಿ ಕೆಂಚಮ್ಮನವರ ಹೆಸರಿನಲ್ಲಿ ಪಹಣಿ ದಾಖಲೆಗಳನ್ನು ಉಳಿಸಲು ಕೋರಿರುತ್ತಾರೆ.

ಈ ಪ್ರಕರಣದಲ್ಲಿ ವಾದಿ ಮತ್ತು ಪ್ರತಿವಾದಿಗಳ ಹೇಳಿಕೆ ಹಾಗು ಅವರ ಪರ ವಾದದ ಮೇರೆಗೆ ಪ್ರಕರಣವನ್ನು ವಿಲೇಗೊಳಿಸಲು ತೀರ್ಮಾನಿಸಿ ಈ ಕೆಳಕಂಡ

**ಆದೇಶ**

ಪ್ರಕರಣದ ಹಿನ್ನೆಲೆ, ವಾಸ್ತವಾಂಶ ಹಾಗು ದಾಖಲೆಗಳನ್ವಯ ವಾದಿ ಮತ್ತು ಪ್ರತಿವಾದಿಗಳು ನೀಡಿದ ಹೇಳಿಕೆ ಮೇರೆಗೆ ಮಾನ್ಯರ ಮಸಲವಾಡ ಗ್ರಾಮದ ಈ ಕೆಳಕಂಡ ಜಮೀನುಗಳ ಪಹಣಿ ದಾಖಲೆಗಳಲ್ಲಿ ಮೂಲ ಪಟ್ಟಾದಾರಳಾದ ಶ್ರೀಮತಿ ಕೆ ಕೆಂಚಮ್ಮ ಇವರ ಹೆಸರನ್ನು ಮುಂದುವರೆಸುತ್ತ ಪ್ರಕರಣವನ್ನು ವಿಲೇಗೊಳಿಸಲು ಆದೇಶಿಸಿದೆ.

| ಗ್ರಾಮ | ಸರ್ವೇ ನಂಬರ್ | ವಿಸ್ತೀರ್ಣ (ಎಕರೆ.ಸೆಂಟ್ಸ್) |
|---|---|---|
| ಮಾನ್ಯರ ಮಸಲವಾಡ | 267/a/1<br>398/b<br>391/3 | 0.10<br>1.16<br>2.45 |

ಈ ಆದೇಶವನ್ನು ಬೆರಳಚ್ಚುಮಾಡಿಸಿ, ದಿನಾಂಕ 26-05-2016ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

26/5/16

**ತಹಶೀಲ್ದಾರರು**
**ಹಡಗಲಿ.**

ಪ್ರತಿಗಳನ್ನು :

1) ವಾದಿ ಮತ್ತು ಪ್ರತಿವಾದಿಗಳಿಗೆ ಹಾಗೂ ಅವರ ಪರ ನ್ಯಾಯವಾದಿಗಳಿಗೆ.

2) ಭೂಮಿ ಕೇಂದ್ರಕ್ಕೆ ಸೂಕ್ತ ಕ್ರಮಕ್ಕಾಗಿ.